ಶ್ರೀ ಕೆ.ಎಂ. ತಮ್ಮಯ್ಯ.—ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ, ಅಲ್ಲಿ ಆಂಧ್ರದವರು ಜಾಸ್ತಿ ಇದ್ದಾರೆಂದು ಹೇಳಿದರು, ಆದ್ದರಿಂದ, ಅವರುಗಳನ್ನು ತೆಗೆದು ಅಪರ ಜಾಗದಲ್ಲಿ ಕರ್ನಾಟಕದವರನ್ನು ಹಾಕತಕ್ಕ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಬಸವಯ್ಯ —ಅಲ್ಲಿ ಅವರನ್ನು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಅಪಾಯಿಂಟ್ ಮಾಡಿಕೊಂಡಿಲ್ಲ. ಅವರಿಗೆ ಯಾವ ಒಂದು ಪೇಸ್ಕೇಲನ್ನು ಫಿಕ್ಸ್ ಮಾಡಿಲ್ಲ. ನಾನು ಅಲ್ಲಿಗೆ ಭೇಟಿ ನೀಡಿದ್ದಾಗ ಅಲ್ಲಿದಂತಹ ನ್ಯೂನತೆಗಳು ಕಂಡುಬಂದವು. ಮುಖ್ಯ ಕಾರ್ಯದರ್ಶಿಯವರನ್ನು ಹಾಗೂ ನಮ್ಮ ಕಮೀಷನರನ್ನು ಕರೆಸಿ ಎಲ್ಲ ವಿಚಾರಗಳನ್ನು ತಿಳಿಸಿ, ಆ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಕರ್ನಾಟಕದಿಂದ ಹೋಗತಕ್ಕವರಿಗೆ ತೊಂದರೆಯಾಗುತ್ತದ್ದರಿಂದ ಅವರಿಗೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಮತ್ತು ಪೇಸ್ಕೇಲ್ಸ್ ಅನ್ನು ಗೊತ್ತುಮಾಡಬೆ ಕೆಂದು ಮಾಡಿದ್ದೇವೆ.

ಅಧ್ಯಕ್ಷರು : ಶ್ರೀ ಎಂ. ವೈ. ಪಾಟೀಲ್‌ರ ಪ್ರಶ್ನೆ ನಂ. ೬೦೯ ಶ್ರೀ ಜಿ. ಪಿ. ಓಡೆಯರಾಜ ಅವರು ಕೇಳಬಹುದು.

Tanks at villages Bindnoor and Afzalpur

609 SRI GOVIND P. VADAYARAJ (Kamalapur) [on behalf of SRI M. Y. PATIL (Afzalpur)].—Will the Minister for Revenue be pleased to state .—

(a) how many years back lands were acquired for the construction of the proposed Tanks at villages Bindnoor and Afzalpur in Afzalpur Taluk ;

(b) whether such land holders have been paid the land acquisition compensation and crop loss compensation ;

(c) if not, why ;

(d) the authority who is responsible for non-payment of compensation ?

SRI B. BASAVALINGAPPA (Minister for Revenue).—

(a) In case of Bindnoor Village, the acquisition proceeding were initiated in June 1977 and in respect of Afzalpur Village, in November 1976.

(b) Land Acquisition proceedings have reached he award stage in respect of Bidnoor Village and compensation will be paid as soon as the award is finally declared.

Final Notification under section 6 (1) of the L.A. Act is yet to be published in respect of lands in Afzalpur Village. Immediately after the publication of the same possession of the land will be taken over and compensation will be paid, as soon as the award is finally declared.

The question of payment of crop compensation does not arise since standing crop was not involved in the process of acquisition.

(c) Does not arise in view of the reply furnished to clause (b) above.

(d) Does not arise in view of the reply furnished to Clauses (a) and (b) above.

ಶ್ರೀ ಗೋವಿಂದ ಪಿ. ಒಡೆಯರಾಜ್.—ಭೂಸ್ವಾಧೀನ ಕಾನೂನಿನ ಅನ್ವಯ ೧೯೭೬ ರಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದರೂ ಈ ಲಾಗಾಯ್ತು ಕಾಂಪನ್‌ಸೇಷನ್ ಕೊಟ್ಟಿಲ್ಲ ಈಗಾಗಲೇ ೩-೪ ವರ್ಷಗಳಾಗಿವೆ. ಅಷ್ಟೇ ಅಲ್ಲದೆ ಅನೇಕ ಕೇಸುಗಳು ಸುಮಾರು ೧೦ ವರ್ಷಗಳಿಂದ ಪೆಂಡಿಗ್ ಇವೆ. ಅದನ್ನು ಸಾಧ್ಯವಾದಷ್ಟು ಜಾಗ್ರತೆ ಪರಿಹಾರ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ .—ಬಿಂದನೂರ್ ಮತ್ತು ಆಫ್‌ಜಲ್‌ಪುರ ಎಂಬ ಈ ಎರಡು ಗ್ರಾಮಗಳ ಜಮೀನನ್ನು ತೆಗೆದುಕೊಂಡಿದ್ದೇವೆ. ಬಿಂದನೂರಿಗೆ ಸಂಬಂಧಪಟ್ಟ ವ್ಯವಹಾರ ೨೨-೬-೧೯೭೭ರಲ್ಲಿ ಪೂರ್ತಿಯಾಗಿದೆ ಆಫ್‌ಜಲ್‌ಪುರದ್ದು ೨೩-೧೦-೧೯೭೬ರಲ್ಲಿ ಪ್ರಾರಂಭ ಮಾಡಿದ್ದೇವೆ. ಬಿಂದನೂರ್ ಜಮೀನಿಗೆ ಅವಾರ್ಡ್ ಮಾಡುವುದಕ್ಕೆ ಹೇಳಿದ್ದೇವೆ, ಅವಾರ್ಡ್ ಆದತಕ್ಷಣ ಹಣ ಕೊಡುತ್ತೇವೆ. ಆಫ್‌ಜಲ್‌ಪುರಕ್ಕೆ ಸಂಬಂಧಪಟ್ಟದ್ದು ಸೆಕ್ಷನ್ ೬ (೧)ರ ಪ್ರಕಾರ ನೋಟಿಫಿಕೇಷನ್ ಮಾಡಿಲ್ಲ. ಕಾನೂನು ಪ್ರಕಾರ ಯಾವಾಗ ಕೊಡಬೇಕೋ ಆಗ ಕೊಡುತ್ತೇವೆ. ತಡ ಏನು ಆಗಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅಲ್ಲಿ ಲ್ಯಾಂಡ್ ಅಕ್ವಿಜಿಷನ್ ಕಾರ್ಯವನ್ನು ಕೈಗೊಳ್ಳುತ್ತಿರುವುದರಿಂದ ಅವರಿಗೆ ಕಾಂಪನ್‌ಸೇಷನ್ ಕೊಡುವುದು ತಡವಾಗುತ್ತಿದೆ ಎನ್ನುತಕ್ಕಂಥ ವಿಚಾರ ತಮ್ಮ ಗಮನಕ್ಕೆ ಬಂದಿದೆ ; ನಾವು ಆ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಬೇರೊಂದು ಸಂದರ್ಭದಲ್ಲಿ ಈ ಲ್ಯಾಂಡ್ ಅಕ್ವಿಜಿಷನ್ ಆಕ್ಟನ್ನು ಅಮೆಂಡ್‌ಮೆಂಟ್ ಮಾಡತಕ್ಕಂಥ ಪ್ರಪೋಸಲ್ ಇದೆಯೆಂದು ತಾವು ಹೇಳಿದಿರಿ. ಈ ಲ್ಯಾಂಡ್ ಅಕ್ವಿಜಿಷನ್ ಆಕ್ಟನ್ನು ತಾವು ಯಾವಾಗ ತರುತ್ತೀರಿ ?

೧.೦೦ ಪಿ.ಎಂ.

ಶ್ರೀ ಬಿ. ಬಸವಲಿಂಗಪ್ಪ —ಈ ವಿಚಾರವನ್ನು ನಾನು ಮೊನ್ನೆ ತಾನೇ ಹೇಳಿದ್ದೇನೆ. ಈ ವಿಚಾರದಲ್ಲಿ ನಾವು ಬಿಲ್ ತಯಾರು ಮಾಡಬೇಕಾಗುತ್ತದೆ. ಈ ಬಗ್ಗೆ ನಾವು ಕೆಲವು ಐಡಿಯಾಗಳನ್ನು ಸಹ ಕಲೆಕ್ಟ್ ಮಾಡಬೇಕಾಗಿದೆ.

ಶ್ರೀ ಗೋವಿಂದ ಪಿ. ಒಡೆಯರಾಜ್ .—ಸ್ವಾಮಿ, ಇದರಲ್ಲಿ ಇನ್‌ವಾಲ್ವ್ ಆಗಿರತಕ್ಕಂಥವರು ಸಣ್ಣ ರೈತರಾಗಿದ್ದಾರೆ. ಅವರು ೩ ವರ್ಷಗಳಿಂದ ಬೆಳೆ ಬೆಳೆದಿಲ್ಲ, ಅವರಿಗೆ ಕಾಂಪನ್‌ಸೇಷನ್ ಸಹ ಕೊಡುತ್ತಾ ಇಲ್ಲ. ಹೀಗಾಗಿ ಅವರಿಗೆ ಬಹಳ ತೊಂದರೆಯಾಗಿದೆ. ಆದಷ್ಟು ಜಾಗ್ರತೆ ಅವರಿಗೆ ಕಾಂಪನ್‌ಸೇಷನ್ ಕೊಡುವುದಕ್ಕೆ ತಾವು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ ಬಸವಲಿಂಗಪ್ಪ —ಅದು ಅವಾರ್ಡ್ ಪಾಸ್ ಮಾಡುವ ಸ್ಟೇಜ್‌ನಲ್ಲಿ ಇದೆ. ಅದು ಆದತಕ್ಷಣ ಅವರಿಗೆ ಕಾಂಪನ್‌ಸೇಷನ್ ಕೊಡುತ್ತೇವೆ.

MR. SPEAKER.—Now Question Hour is over.

QUESTIONS FOR ANSWERS ON THE DAY
(but not taken up)

Allotment of sites to siteless persons in Municipal area.

207 SRI S. H. NALAVAGAL (Ranibennur) —Will the Minister for Municipal Administration be pleased to state :—

(a) the number of landless and Houseless persons in Ranibennur City ;